ಸೂಪರ್ ಜನಮನ
ಕಣಕ
ಸೋಮವಾರ ಸೆಪ್ಟೆಂಬರ್ 1, 2014
super.janamana@gmail.com

ಹಾವು ಸಾಯಬೇಕು, ಕೋಲು ಮುರಿಯಬಾರದು

ಕೊಳ್ಳೇಗಾಲ ಶರ್ಮ

ಉಂಡೂ ಹೋದ, ಕೊಂಡೂ ಹೋದ ಎನ್ನುವ ಗಾದೆಯನ್ನು ಕೇಳಿದ್ದೀರಲ್ಲ. ಬೇರಾರನ್ನೋ ಅವಲಂಬಿಸಿಕೊಂಡು ಜಾಣತನದ ಬದುಕು ಬದುಕುವವರನ್ನು ಕಂಡು ವಿವೇಕಿಗಳು ಆಡಿದ ಮಾತು ಇದು. ಮನುಷ್ಯ ಜೀವನದಲ್ಲಿ ಇದು ಎಷ್ಟು ನಿಜವೋ, ಪ್ರಾಣಿಗಳ ಜೀವನದಲ್ಲಿಯೂ ಅಷ್ಟೇ ನಿಜ ಎನ್ನುವುದು ನಂಬಲು ಕಷ್ಟವಾದರೂ ಸತ್ಯ! ತಮ್ಮ ಬದುಕಿಗಾಗಿ ಬೇರೊಂದು ಜೀವಿಯನ್ನು ಅವಲಂಬಿಸುವ ಪರಾವಲಂಬಿ ಜೀವಿಗಳು ತಮ್ಮ ಆಸರೆಯನ್ನು ಹಿಂಡಿ, ಹಿಪ್ಪೆ ಮಾಡುವುದಷ್ಟೆ ಅಲ್ಲ. ಅವುಗಳ ಜೀವನಶೈಲಿಯನ್ನು ತಮ್ಮ ಅನುಕೂಲಕ್ಕೆ ಬದಲಿಸಿಕೊಳ್ಳುತ್ತವೆ ಎಂದು ಇತ್ತೀಚಿನ ಮೂರು ಅಧ್ಯಯನಗಳು ವರದಿ ಮಾಡಿವೆ. ಒಂದೇ ಒಂದು ಜೀವಕೋಶವಿರುವ ಬ್ಯಾಕ್ಟೀರಿಯಾ ಇರಬಹುದು, ಹಲವು ಸಹಸ್ರ ಕೋಶಗಳ ಬೂಸಿರಬಹುದು ಅಥವಾ ಲಕ್ಷಾಂತರ ಜೀವಕೋಶಗಳಿರುವ ಹುಳುಗಳಿರಬಹುದು, ಕಥೆ ಒಂದೇ. ಪರಾವಲಂಬಿಗಳು ತಮಗೆ ಆಸರೆಯಿತ್ತ ಜೀವಿಗಳ ಚಟುವಟಿಕೆಯನ್ನೂ ನಿಯಂತ್ರಿಸುತ್ತವೆಯಂತೆ.


ಓಫಿಯೋಕಾರ್ಡಿಸೆಪ್ಸ್ ಕಾಂಪೊನೋಟಿ ರೂಫಿಪೀಡಿಸ್ ಬೂಸು ಹತ್ತಿಕೊಂಡು ಅರೆಜೀವವಾಗಿರುವ ಇರುವೆ. ಸಾಯುವ ಮುನ್ನ ಇದು ಗೂಡಿನ ಬಾಗಿಲಿಗೇ ಹೋಗುತ್ತದಂತೆ.

ಬ್ರೆಜಿಲ್‌ನ ದಟ್ಟ ಹಸಿರು ಕಾಡುಗಳಲ್ಲಿ ವಾಸಿಸುವ ಒಂದು ಇರುವೆಗೆ ಓಫಿಯೋಕಾರ್ಡಿಸೆಪ್ಸ್ ಕಾಂಪೊನೋಟಿರೂಫಿಪೀಡಿಸ್ ಎನ್ನುವ ಬೂಸು ಕಾಡುತ್ತದೆ. ಬ್ರೆಜಿಲ್ ಸ್ಟೇಟ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಜೊತೆಗೂಡಿ ಅಮೆರಿಕೆಯ ಪೆನ್ ಸ್ಟೇಟ್ ವಿಶ್ವವಿದ್ಯಾನಿಲಯದ ರಾಕೆಲ್ ಲೊರೆಟೋ ಈ ಬೂಸುಗಳ ಜೀವನಚರಿತ್ರೆಯನ್ನು ಅಧ್ಯಯನ ಮಾಡಿದ್ದಾರೆ. ಇರುವೆಗಳನ್ನು ತಾಕುವ ಈ ಬೂಸು, ಅವನ್ನು ಕೊಲ್ಲುವ ಮುನ್ನ ತನ್ನ ಸಂತಾನಾಭಿವೃದ್ಧಿಗೆ ಅನುಕೂಲವಾಗುವಂತೆ ಇರುವೆಗಳ ನಡವಳಿಕೆಯನ್ನು ಬದಲಿಸುತ್ತದೆಯಂತೆ.

ಬೂಸಿನ ಬೀಜಚೀಲ (ಬಾಣದ ಗುರುತು) ವನ್ನು ಹೊತ್ತಿರುವ ಜೀವಚ್ಛವ ಇರುವೆ

ಓಫಿಯೊಕಾರ್ಡಿಸೆಪ್ಸ್ ಇರುವೆಗಳನ್ನು ತಾಕಿದ ಮೇಲೆ ಇರುವೆಗಳ ದೇಹದಲ್ಲಿ ತನ್ನ ನೂಲಿನ ಜಾಲವನ್ನು ಹೆಣೆಯುತ್ತದೆ. ಇದರಿಂದಾಗಿ ಇರುವೆಗಳು ನಿತ್ರಾಣಗೊಂಡು ಸಾಯುತ್ತವೆ ಎನ್ನುವುದು ಈ ಹಿಂದೆಯೇ ತಿಳಿದಿತ್ತು. ಇರುವೆಗಳು ತಮ್ಮ ಗೂಡನ್ನು ಅಧ್ಯಯನ ಮಾಡಿ ಶುಚಿಯಾಗಿಟ್ಟುಕೊಳ್ಳುವುದರಲ್ಲಿ ನಿಸ್ಸೀಮರು. ಎಲ್ಲಿಯಾದರೂ ರೋಗಿಷ್ಟ ಅಥವಾ ಸತ್ತ ಇರುವೆ ಇದ್ದರೆ ಅದನ್ನು ತಕ್ಷಣವೇ ಗೂಡಿನಿಂದ ಹೊರಗೆ ಎಸೆದು ತಮ್ಮನ್ನು ಕಾಪಾಡಿಕೊಳ್ಳುತ್ತವೆ. ಅಂದ ಮೇಲೆ ಇರುವೆಗಳ ಗೂಡಿನಲ್ಲಿ ಈ ಜೀವಿ ಇರುವುದು ಅಸಾಧ್ಯವಷ್ಟೆ. ಆದರೆ ಲೊರೆಟೋ ಅಧ್ಯಯನ ಮಾಡಿದ ಎಲ್ಲ ಇರುವೆಗಳ ಗೂಡುಗಳಲ್ಲೂ ಓಫಿಯೋಕಾರ್ಡಿಸೆಪ್ಸ್ ಇದ್ದೆ ಇತ್ತು. ಅಂದರೆ ಇರುವೆಗಳು ಈ ಬೂಸನ್ನು ಹೊರದೂಡಿದರೂ ಅದು ಹೇಗೋ ಹೊಸ ಗೂಡುಗಳನ್ನು ಹುಡುಕಿಕೊಳ್ಳುತ್ತಿದೆ ಎಂದಾಯಿತಷ್ಟೆ.

ಕೈ, ಕಾಲಿಲ್ಲದ ಈ ಜೀವಿ ಇರುವೆಗಳ ಹೊಸ ಗೂಡನ್ನು ಹೇಗೆ ಹುಡುಕುತ್ತದೆ ಎನ್ನುವುದು ನಿಗೂಢವಾಗಿತ್ತು. ಲೊರೆಟೊ ಅವರ ಅಧ್ಯಯನ ಈ ಗುಟ್ಟನ್ನು ರಟ್ಟಾಗಿಸಿದೆ. ಬೂಸಿನ ಬೀಜಗಳನ್ನು ಉತ್ಪಾದಿಸುವ ಅಂಗ ಇರುವೆಯ ದೇಹವನ್ನು ತೂರಿಕೊಂಡು ಹೊರಗೆ ಬರುತ್ತದೆ. ಹೀಗಾದಾಗ ಇರುವೆ ಬದುಕುಳಿಯಲು ಸಾಧ್ಯವೇ ಇಲ್ಲ. ಆದರೆ ಇದಕ್ಕೂ ತುಸು ಮುನ್ನ, ಇರುವೆ ಅರೆಜೀವವಾಗಿರುತ್ತದೆಯಂತೆ. ಈ ಅರೆ ಜೀವವಾಗಿರುವ 'ಬೂಸಿಷ್ಠ' ಇರುವೆ ಸಾಯುವ ಮುನ್ನ ಗೂಡಿನ ಬಳಿಯಲ್ಲೇ ಬಂದು ಸಾಯುತ್ತದಂತೆ.





ಪರಾವಲಂಬಿಗಳ ವಿಶೇಷ ತಂತ್ರಗಳು

ಇರುವೆಗಳು ಆಹಾರಕ್ಕಾಗಿ ಅಲೆದಾಡುವ ಹಾದಿಯಲ್ಲಿ, ಅದರಲ್ಲೂ ಗೂಡಿನ ಹೊಸ್ತಿಲಲ್ಲೇ, ಬೂಸು ಹೊತ್ತಿದ ಅರೆಜೀವವಾದ ಇರುವೆಗಳು ಅಡ್ಡ ಮಲಗಿ ಸಾಯುವುದನ್ನು ಲೊರೆಟೊ ಕಂಡಿದ್ದಾರೆ. ಇದು ಕಾಕತಾಳೀಯವಾಗಿರಲಿಕ್ಕಿಲ್ಲ. ಏಕೆಂದರೆ ಲೊರೆಟೋ 24000 ಚದರ ಕಿಲೋಮೀಟರುಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿರುವ ಇರುವೆಗೂಡುಗಳನ್ನು ಪರಿಶೀಲಿಸಿದ್ದಾರೆ. ಎಲ್ಲ ಕಡೆಯೂ ಒಂದೇ ಕಥೆ. ಬೂಸು ಹತ್ತಿದ ಇರುವೆಗಳು ಮನೆಯ ಬಳಿಯೇ ಬಂದು ಸಾಯುತ್ತವೆ. ಇದರಿಂದಾಗಿ ಬೂಸಿನ ಬೀಜಗಳು ಬೇರೆ ಇರುವೆಗಳಿಗೆ ಹತ್ತಿಕೊಳ್ಳುವ ಸಾಧ್ಯತೆ ಖಂಡಿತ ಹೆಚ್ಚುತ್ತದೆಯಷ್ಟೆ. ಅರೆಜೀವವಾದ ಇರುವೆಗಳನ್ನು ಬೂಸು ಹೀಗೆ ನಿಯಂತ್ರಿಸುತ್ತಿರಬೇಕು ಎನ್ನುವುದು ಲೊರೆಟೋ ಅವರ ಅಭಿಪ್ರಾಯ.

ಇವರ ಅಭಿಪ್ರಾಯ ಕೇವಲ ಅನಿಸಿಕೆಯಲ್ಲ ಎನ್ನುವುದಕ್ಕೆ ಪೆನ್ಸಿಲ್ವೇನಿಯ ಸ್ಟೇಟ್ ವಿವಿಯ ಚಾರಿಸ್ಸ ಡೆಬೆಕರ್ ಮತ್ತು ಸಂಗಡಿಗರು ಒದಗಿಸಿದ್ದಾರೆ. ಓಫಿಯೋಕಾರ್ಡಿಸೆಪ್ಸ್ ಯೂನಿಲಾಟೆರಾಲಿಸ್ ಎನ್ನುವ ಈ ಬೂಸು ಇರುವೆಗಳು ದವಡೆಯನ್ನು ಭದ್ರವಾಗಿ ಕಚ್ಚುವಂತೆ ಮಾಡುತ್ತದೆಯಂತೆ. ಆದರೆ ಇದು ನಿಸರ್ಗದಲ್ಲಿ ಕೆಲವೇ ಇರುವೆಗಳನ್ನು ತಾಕುತ್ತದೆ ಎನ್ನುವುದನ್ನು ಕಂಡ ಡೆಬೆಕರ್ ಹಲವಾರು ಜಾತಿಯ ಇರುವೆಗಳಿಗೆ ಇದನ್ನು ತಾಕಿಸಿ ಪರೀಕ್ಷಿಸಿದ್ದಾರೆ. ಎಲ್ಲ ಜಾತಿಯ ಇರುವೆಗಳನ್ನೂ ಇದು ಕೊಲ್ಲಬಲ್ಲುದಾದರೂ, ದವಡೆ ಕಚ್ಚಿಸುವುದು ಮಾತ್ರ ಕೆಲವೇ ಜಾತಿಗಳಲ್ಲಿ. ಇದಕ್ಕೆ ಬೂಸಿನಲ್ಲಿರುವ ಯಾವುದಾದರೂ ರಾಸಾಯನಿಕ ಕಾರಣವಿರಬಹುದು ಎಂದು ಊಹಿಸಿದ ಡೆಬೆಕರ್ ತಂಡ ವಿವಿಧ ಜಾತಿಯ ಇರುವೆಗಳನ್ನು ಸೋಂಕಿದ ಬೂಸುಗಳು ಸ್ರವಿಸಿದ ರಾಸಾಯನಿಕಗಳನ್ನು ಪತ್ತೆ ಮಾಡಿ ಹೋಲಿಸಿದ್ದಾರೆ. ಒಂದೊಂದು ಇರುವೆಯನ್ನು ತಾಕಿದಾಗಲೂ ಇವು ಬೇರೆ, ಬೇರೆ ರಾಸಾಯನಿಕಗಳನ್ನು ಸ್ರವಿಸುತ್ತವಂತೆ. ಆದರೆ ನಿಸರ್ಗದಲ್ಲಿ ಸಹಜವಾಗಿ ಈ ಬೂಸು ಕಾಣಿಸುವ ಇರುವೆಗಳಲ್ಲಿಯಷ್ಟೆ ಮಿದುಳನ್ನು ತಾಕುವ ರಾಸಾಯನಿಕಗಳನ್ನು ಬೂಸು ಸ್ರವಿಸುತ್ತದೆ ಎನ್ನುವುದು ಕಂಡು ಬಂದಿದೆ. ಇಂತಹ ರಾಸಾಯನಿಕಗಳಲ್ಲಿ ಎರಡು ವಿಶೇಷವಾಗಿದ್ದು, ಇತರೆ ಜೀವಿಗಳಲ್ಲಿ ಕ್ಯಾನ್ಸರ್ ಹಾಗೂ ನರಸಂಬಂಧಿ ಖಾಯಿಲೆಗಳಲ್ಲಿ ಇವುಗಳ ಪಾತ್ರವಿರುವುದು ಖಚಿತವಂತೆ.

2ನೇ ಪುಟಕ್ಕೆ

ನಿತ್ಯ ರೂಪು ಬದಲಿಸುವ ಎಬೋಲ



ಎಬೋಲ ರೋಗದ ಹೆಸರು ಕೇಳಿ ಇನ್ನೂ ನಾಲ್ಕು ತಿಂಗಳುಗಳು ಕಳೆದಿವೆಯಷ್ಟೆ. ಈಗಾಗಲೇ ಇದು ಈ ದಶಕದ ಅತಿ ಗಂಭೀರ ಆರೋಗ್ಯ ಸಮಸ್ಯೆ ಎಂದು ಕುಖ್ಯಾತಿ ಪಡೆದಿದೆ. ಇದುವರೆವಿಗೂ ಸುಮಾರು 240 ಮಂದಿ ಈ ವೈರಸ್‌ನ ಖಾಯಿಲೆಯ ಲಕ್ಷಣಗಳಿಗಾಗಿ ಆಸ್ಪತ್ರೆ ಸೇರಿದ್ದಾರೆ. ಇವರಲ್ಲಿ ಅರ್ಧಕ್ಕರ್ಧ (124 ಮಂದಿ) ಸಾವನ್ನಪ್ಪಿದ್ದಾರೆ ಎನ್ನುವುದು ಈ ವೈರಸ್‌ನ ಹಾನಿಕಾರಕ ಗುಣವನ್ನು ಎತ್ತಿ ತೋರುತ್ತದೆ.

ಮೊನ್ನೆ ಸೈನ್ಸ್ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯೊಂದು ಈ ಮಾರಕ ಸೋಂಕು ಆರಂಭವಾದ ರೀತಿ ಹಾಗೂ ತದನಂತರ ಅದರ ನಡೆಯನ್ನು ದಾಖಲಿಸಿದೆ. ನಾಲ್ಕು ತಿಂಗಳ ಅವಧಿಯಲ್ಲಿ ಎಬೊಲ ವೈರಸ್‌ನ ರೂಪ ಹಾಗೂ ಚಟುವಟಿಕೆಗಳಲ್ಲಿ ಕಂಡು ಬಂದ ವ್ಯತ್ಯಾಸಗಳನ್ನು ಗುರುತಿಸಿದೆ.

ಎಬೊಲದ ಈ ದಾಳಿ ಆರಂಭವಾಗಿದ್ದು ಸಿಯೆರ ಲಿಯೊನೆಯ ಸರ್ಕಾರಿ ಆಸ್ಪತ್ರೆಯಲ್ಲಿ ಮೇ ತಿಂಗಳ ಕೊನೆಯ ವಾರದಲ್ಲಿ. ಆಸ್ಪತ್ರೆಗೆ ಬಂದ ಗರ್ಭಿಣಿ ಯುವತಿಯೊಬ್ಬಳು ಅತಿ ಜ್ವರದಿಂದ ನರಳುತ್ತಿದ್ದಳು. ಗರ್ಭಪಾತವೂ ಆಗಿತ್ತು. ಆ ಪ್ರದೇಶದಲ್ಲಿ ಸಾಮಾನ್ಯವಾದ ಲಾಸಾ ಜ್ವರ ಇರಬೇಕು ಎಂದು ವೈದ್ಯರು ಭಾವಿಸಿದ್ದರು. ಪಕ್ಕದಲ್ಲೇ ಇದ್ದ ಗಿನೀ ಪ್ರಾಂತ್ಯದಲ್ಲಿ ಇದು ಹಲವಾರು ತಿಂಗಳಿಂದ ಹಬ್ಬುತ್ತಿದ್ದುದು ಅವರ ಗಮನಕ್ಕೆ ಬಂದಿರಲಿಲ್ಲ. ಯಾವಾಗ ಯುವತಿಯಿಂದ ರಕ್ತ ಅತಿಯಾಗಿ ಸ್ರವಿಸಲು ತೊಡಗಿದಾಗ ವೈದ್ಯರ ಅನುಮಾನ ಹೆಚ್ಚಾಗಿ ಇದು ಎಬೊಲ ಎಂದು ಶಂಕಿಸಿದರು. ಅವರ ಅನುಮಾನ ನಿಜವಾಗಿತ್ತು. ಅನಂತರ ಸುತ್ತಮುತ್ತಲಿನ ನಾಲ್ಕು ರಾಷ್ಟ್ರಗಳ ವೈದ್ಯರುಗಳು ಈ ವೈರಸ್‌ನ ಜಾಡು ಹಿಡಿದು ಪ್ರತಿಯೊಂದು ರೋಗಿಯ ರಕ್ತವನ್ನೂ ಪರೀಕ್ಷಿಸಲು ಆರಂಭಿಸಿದರು. ಇವರುಗಳ ಪ್ರಯತ್ನದ ಫಲವನ್ನು ಸೈನ್ಸ್ ಪತ್ರಿಕೆ ಈ ವಾರ ಪ್ರಕಟಿಸಿದೆ.

ಸಿಯೆರಾ ಲಿಯೊನೆಯ ಆಸ್ಪತ್ರೆಯಲ್ಲಿ ಸಾವಿಗೀಡಾದ ಯುವತಿ ಈ ರೋಗದ ಮೂಲವೆಂದು ಭಾವಿಸಿದ್ದರೆ

2ನೇ ಪುಟಕ್ಕೆ

ಕಹಿ ಸಿಹಿ ಮದ್ಯೆ ಸ್ಯಾನೆ ಯತ್ವಾಸ ಇಲ್ಲ

ಹೈಕ್ಳ ಪಾಠ

ಲೇ ಹೈಕ್ಳ. ಇದೇನ್ರುಲ. ಅಬ್ಬುದ್ ಪರ್ಸಾದ ತೊಗೊಂಬರ್ರಲಾ ಅಂದ್ರೆ ಏನ್ ತಂದೀರೋ? ಗಣೇಸನ ಅಬ್ಬಕ್ಕೆ ಮಾಡುದ್ ಕಡಬು, ಓಳಗೆ ತೊಗೊಂಬಾರ್ಲಾ ಅಂದ್ರೆ ಬೇವು, ಬೆಲ್ಲ ತಂದೀರಲ್ಲೋ? ನಂಗೂ ಗೊತ್ರಲಾ ನನ್ನ ಕಿಚಾಯ್ಸಕ್ಕೇ ಅಂತಲೇ ನೀವು ಇಂಗೆ ಮಾಡಿವ್ರಿ ಅಂತ. ಆದ್ರೆ ಒಂದ್ ಇಸ್ಯ ಗೊತ್ತೆನ್ರಲಾ? ಈ ಜೀವನದಾಗೆ ಸಿಯಿ, ಕಯಿ ಎಲ್ಲೂ ಒಂದೇಯ. ಎಲ್ಡಕ್ಕೂ ಸಾನೆ ಯತ್ವಾಸ ಏನೂ ಇಲ್ಲ ಕಣ್ರಲಾ?

ಯಾಕ್ರುಲಾ? ಬೆಪ್ರಂಗೆ ಸುಮ್ನಾಗ್ಬುಟ್ರಿ. ತೋಳ ದ್ರಾಕ್ಸಿ ಉಳಿ ಅಂದಂಗೆ ನಾನೇನೂ ಸಿಯಿ ಸಿಗ್ಲಿಲ್ಲ ಅಂತ ಇಂಗೆ ಯೋಳ್ತಿಲ್ಲಪ್ಪೋ! ಇದು ಇಗ್ನಾನಿಗಳು ಯೇಳಿರೋ ಮಾತು. ಬ್ಯಾಕಿದ್ರೆ ಅಮೆರಿಕದ ಆರ್ವರ್ಡ್ ಇಸ್ವವಿದ್ಯಾನಿಲಯದ ಇಗ್ನಾನಿಗೋಳ್ನೇ ಇಚಾರಿಸ್ಕಳಿ. ಇವ್ರು ಆ ಊರಿನ ಪುಟ್ಟಕ್ಕಿ ಅಮ್ಮಿಂಗ್ ಬರ್ಡ್ ಗೆ ಸಿಯಿ ಎಂಗೆ ಗೊತ್ತಾಯ್ತದೆ ಅಂತ ಪರೀಕ್ಸೆ ಮಾಡವ್ರೆ.

ಅದ್ರಲ್ಲೇನಪ್ಪ ಇಸೇಸ ಅನ್ನಬ್ಯಾಡಿ. ನಿಂಗು ಗೊತ್ತಲ್ಲವ್ರ. ನಂ ನಾಲ್ಗೇಗೆ ನಾಲಕ್ಕೇ ರುಚಿ ಗೊತ್ತಾಗಾದು. ಕಯಿ, ಸಿಯಿ, ಉಳಿ ಮತ್ತ ಉಪ್ಪು. ನಾಲ್ಗೆ ಮ್ಯಾಲೆ ಇರಾ ಮೊಗ್ಗಿನಂತ ಗುಳ್ಳೆಗೋಳು ಈ ರುಚಿ ತಿಳಿಸ್ತಾವೆ ಅಂತಾರೆ ಇಗ್ನಾನಿಗಳು. ಈ ಗುಳ್ಳೆಗಳ ಮ್ಯಾಲೆ ಕೆಲ್ವು ವಸ್ತುಗಳಿರ್ತಾವಂತೆ. ರಿಸೆಪ್ಟಾರು ಅನ್ನಾ ಇವಗೋಳು ಒಂದೊಂದು ರುಚೀಗೂ ಬ್ಯಾರೆ, ಬ್ಯಾರೇನೇ ಇರತಾವೆ. ಇವು ಇಲದೀರೆ ರುಚೀನೇ ಗೊತ್ತಾಗಾಕಿಲ್ವಂತೆ.

ಇಸೇಸ ಏನಪ್ಪ ಅಂದ್ರೆ ಪಕ್ಸಿಗೋಳಲ್ಲಿ ಸಿಯಿ ತಿಳ್ಸೋ ರಿಸೆಪ್ಟಾರು ಇರಾಕಿಲ್ಲವಂತೆ. ಅಂಗಂದ್ರೆ ಈ ಅಮ್ಮಿಂಗ್ ಬರ್ಡ್ ಗೆ ಅದ್ಯೆಂಗೆ ಸಿಯಿ ತಿಳೀತದೆ ಅಂತಲ್ಲವ್ರ ನಿಂ ಪ್ರಸ್ನೆ. ನಿಜಾ ಕಣ್ರುಲಾ. ಇದೇ ಇಸೇಸ. ಯಾಕಂದ್ರೆ ಈ ಪುಟ್ಟಕ್ಕಿ ಇದ್ಯಲ್ಲ, ಅದು ಹೂನಾಗಿರೋ ಸೀ ಬುಟ್ರೆ ಇನ್ನೇನೂ ಉಣ್ಣಾದೆ ಇಲ್ಲ. ಅಂದ ಮ್ಯಾಕೆ ಇದಕ್ಕೆ ಸಿಯಿ ಸಕ್ರೆ ಎಲ್ಲದೆ, ಎಂಗೆ ರುಚುಸ್ತದೆ ಅಂತ ಗೊತ್ತಿರಬೇಕಲ್ಲವ್ರಾ?


ಈ ಅನ್ಮಾನ ಆರ್ವರ್ಡ್ ಇಗ್ನಾನಿಗೋಳ್ನೂ ಬಿಡನಿಲ್ಲ ಅನ್ನಿ. ಅದ್ಕೆ ಅವ್ರು ಈ ಪಕ್ಸೀ ನಾಲ್ಗೆಲಿ ಯಾವ್ಯಾವ ರಿಸೆಪ್ಟಾರುಗೋಳು ಇರಬ್ಯೆದು ಅಂತ ಪರೀಕ್ಸೆ ಮಾಡುದ್ರಂತೆ. ನಮ್ಮ ನಾಲ್ಗೇಲಿ ಇರುತ್ತಲ್ಲ ಅಂತದೇ ಸಿಯಿ ಗುರ್ತು ಇಡಿಯೋ ರಿಸೆಪ್ಟಾರು ಈ ಪಕ್ಸಿ ನಾಲ್ಗೇಲೂ ಅದೆ ಅನ್ನೋದು ಇದ್ರಿಂದ ತಿಳದೈತೆ.

ಇದು ಒಸಿ ಇಚಿತ್ರ. ಯಾಕಂದ್ರೆ ಬ್ಯಾರೆ ಯಾವ ಪಕ್ಸೀಲೂ ಇಲ್ದೀರೋ ರಿಸೆಪ್ಟಾರು ಈ ಪಕ್ಸೀಲಿ ಮಾತ್ರ ಯೆಂಗೆ ಬಂತು? ಇದ್ರ ನೆಂಟ ಪಕ್ಸಿಗೋಳಲ್ಲೂ ಆ ರಿಸೆಪ್ಟಾರು ಇಲ್ಲವಂತೆ. ಅಂದ ಮ್ಯಾಕೆ ಇದು ಈ ಪಕ್ಸೀಲಿ ಇಸೇಸವಾಗಿ ಉಟ್ಟಿರಬ್ಯಾಕು ಅಂತಾರೆ ಆರ್ವರ್ಡ್ ಇಗ್ನಾನಿಗೋಳು.

ಪಕ್ಸೀಲಿ ಇಲ್ದೀರ, ಬ್ಯಾರೆ ಪ್ರಾಣಿಗೋಳಲ್ಲಿ ಅಸ್ಟೆ ಇರಾ ಈ ರಿಸೆಪ್ಟಾರು ಈ ಪುಟ್ಟಕ್ಕೀಲಿ ಮಾತ್ರ ಇರಬ್ಯೆದು ಅಂದ್ರೆ ಅದು ಪಕ್ಸೀಲಿ ಇರಾ ಯಾವ್ದೋ ರಿಸೆಪ್ಟಾರ್‌ನಿಂದಾನೇ ಉಟ್ಟಿರಬ್ಯಾಕು ಅಲ್ಲವ್ರಾ? ಅಂಗೆ ನೋಡದ್ರೆ ಪಕ್ಸಿಗೋಳಲ್ಲಿ ಇರಾ ಕಯಿ ರುಚಿ ಗುರ್ತು ಇಡಿಯೋ ರಿಸೆಪ್ಟಾರ್‌ನಂಗೇ ಇದೂ ಅದ್ಯಂತೆ. ಒಸೀನೇ ಒಸಿ ಯತ್ವಾಸ ಅಂತಾರೆ ಇಗ್ನಾನಿಗೋಳು.

ನೋಡ್ರಲಾ. ಕಯಿ ಎಂಗೆ ಸಿಯಿ ಆಗಿಬುಡ್ತು. ಕಯಿ ಮತ್ತೆ ಸಿಯಿ ಮದ್ಯೆ ಸ್ಯಾನೆ ಯತ್ವಾಸ ಇಲ್ಲ ಅಂತ ಗೊತ್ತಾಯ್ತಲ್ರುಲಾ?

ಹಳ್ಳಿ ಮೇಷ್ಟ್ರು




ಚುಟುಕು ಚೂರ್ಣ

ಡೈನೊಸಾರ್ ದಾಯಿ



ಡೈನೊಸಾರ್‌ಗಳು ಬೇಜವಾಬುದಾರಿ ಪ್ರಾಣಿಗಳಾಗಿರಲಿಲ್ಲವಂತೆ. ಸಾಮಾನ್ಯವಾಗಿ ಹಾವು, ಹಲ್ಲಿಗಳು ಮೊಟ್ಟೆಯಿಟ್ಟ ಮೇಲೆ ಅವು ಮರಿಯಾಗುವವರೆಗಷ್ಟೆ ತಮ್ಮ ಜವಾಬುದಾರಿ ಎಂದು ತಿಳಿದುಕೊಳ್ಳುತ್ತವೆ. ಮರಿಗಳಾದ ಕೂಡಲೆ ಅವನ್ನು ಅವುಗಳ ಪಾಡಿಗೆ ಬಿಟ್ಟು ತಮ್ಮ ಹಾದಿ ಹಿಡಿದುಕೊಂಡು ಹೋಗುವುದು ಸಾಮಾನ್ಯ. ಆದರೆ ಪೆನ್ಸಿಲ್ವೇನಿಯಾ ವಿವಿಯ ವಿಜ್ಞಾನಿಗಳಿಗೆ ದೊರಕಿದ ಕಲ್ಲೊಂದರಲ್ಲಿ ಇಪ್ಪತ್ತನಾಲ್ಕು ಮರಿ ಡೈನೊಸಾರ್‌ಗಳ ಪಳೆಯುಳಿಕೆಗಳ ಜೊತೆಗೆ ಒಂದು ದೊಡ್ಡ ಡೈನೊಸಾರ್‌ನ ಪಳೆಯುಳಿಕೆಯೂ ಇದೆ. ಬಹುಶಃ ಈ ದೊಡ್ಡ ಡೈನೊಸಾರ್ ಮರಿಗಳನ್ನು ಕಾಯುತ್ತಿದ್ದಿರಬೇಕು. ಮೊಟ್ಟೆಗಳ ಜೊತೆಗೆ ದೊಡ್ಡ ಡೈನೊಸಾರ್ ಪಳೆಯುಳಿಕೆಗಳು ಈ ಹಿಂದೆ ದೊರೆತಿದ್ದುವು. ಆದರೆ ಮರಿಗಳ ಜೊತೆಗೇ ದೊಡ್ಡ ಡೈನೊಸಾರ್‌ನ ಪಳೆಯುಳಿಕೆ ದೊರೆತಿರುವುದು ಇದೇ ಮೊದಲು.

ಅಗ್ಗದ ಹೈಡ್ರೋಜನ್




ನಾಳಿನ ಕಾರು, ಬಸ್ಸುಗಳಿಗೆ ಬೇಕಾದ ಇಂಧನ ಈಗ ಅಗ್ಗವಾಗಿ ತಯಾರಾಗಲಿದೆ. ಇಂಧನ ಕೋಶಗಳೆಂಬ ವಿದ್ಯುತ್ ಉತ್ಪಾದಿಸುವ ಸಾಧನಗಳು ನಾಳಿನ ವಾಹನಗಳನ್ನು ಚಾಲಿಸುತ್ತವೆಂಬ ಆಶಯವಿದೆ. ಹೊಗೆಯುಗುಳದ, ಪರಿಸರಸ್ನೇಹಿ ವಾಹನಗಳಿಗೆ ನೆರವಾಗಬಲ್ಲ ಇವುಗಳಲ್ಲಿ ಬಳಸಲು ಹೈಡ್ರೋಜನ್‌ನ ಅವಶ್ಯಕತೆ ಇದೆ. ನೀರಿನಲ್ಲಿ ಯಥೇಚ್ಛವಾಗಿದ್ದರೂ ಹೈಡ್ರೋಜನ್ ತಯಾರಿಕೆ ದುಬಾರಿಯೇ ಹೌದು. ಇದುವರೆವಿಗೂ, ನೀರಿನಿಂದ ಹೈಡ್ರೋಜನ್ ಪ್ರತ್ಯೇಕಿಸಲು ದುಬಾರಿ ಲೋಹಗಳಾದ ಪ್ಲಾಟಿನಂ ಬೇಕಾಗಿತ್ತು. ಇದೀಗ ಸ್ಟಾನ್‌ಫರ್ಡ್ ಹಾರ್‌ಕೋರ್ಟ್ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಸತುವಿನ ಆಕ್ಸೈಡ್ ಲೇಪಿಸಿದ ಸತುವನ್ನು ಪ್ಲಾಟಿನಂ ಬದಲಿಗೆ ಬಳಸಬಹುದೆಂದು ನಿರೂಪಿಸಿದ್ದಾರೆ. ಎರಡೇ ಎರಡು ಪೆನ್ ಟಾರ್ಚ್ ಬ್ಯಾಟರಿಗಳನ್ನು ಬಳಸಿ ಈ ವಿಧಾನದಿಂದ ನೀರನ್ನು ಒಡೆಯಬಹುದಂತೆ. ಇಷ್ಟು ಅಗ್ಗವಾಗಿ ಹೈಡ್ರೋಜನ್ ತಯಾರಿಕೆ ಈ ಹಿಂದೆ ಸಾಧ್ಯವಾಗಿರಲಿಲ್ಲ.

ದಾಳಿಂಬೆ ಮದ್ದು

ದಾಳಿಂಬೆಯಲ್ಲಿರುವ ರಾಸಾಯನಿಕವೊಂದು ಮುಪ್ಪಿನಲ್ಲಿ ಕಾಡುವ ಆಲ್ಜೀಮೀರನ ಖಾಯಿಲೆಗೆ ವರದಾನವಾಗಬಹುದೆನ್ನುವ ಸುದ್ದಿಯನ್ನು ಜರ್ಮನಿಯ ಫ್ರೈಬಗ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಪ್ರಕಟಿಸಿದ್ದಾರೆ. ಆಲ್ಜೀಮೀರನ ಖಾಯಿಲೆಯಿಂದ ಬಾಧಿತರಾದವರ ನೆನಪಿನ ಶಕ್ತಿ ಕ್ಷೀಣಿಸಿ, ಅಂಗಗಳ ಮೇಲಿನ ನಿಯಂತ್ರಣವೂ ಕುಗ್ಗುತ್ತದೆ. ಇದಕ್ಕೆ ಅವರ ಮಿದುಳಿನಲ್ಲಿರುವ ನರಕೋಶಗಳ ಕ್ಷಯವೇ ಕಾರಣ ಎನ್ನುವುದು ತಿಳಿದು ಬಂದಿದೆ. ದಾಳಿಂಬೆಯಲ್ಲಿರುವ ಪ್ಯುನಿಕಾಲಾಜಿನ್ ಎನ್ನುವ ರಾಸಾಯನಿಕ ಈ ನರಕೋಶಗಳ ಕ್ಷಯವನ್ನು ತಡೆಯುತ್ತದೆಂದು ಇವರು ಪತ್ತೆ ಮಾಡಿದ್ದಾರೆ. ಆದರೆ ಎಷ್ಟು ಪ್ಯುನಿಕಾಲಾಜಿನ್ ಸೇವಿಸಿದರೆ ಆಲ್ಜೀಮೀರನ ಖಾಯಿಲೆಯನ್ನು ತಡೆಯಬಹುದು ಎನ್ನುವುದು ಇನ್ನು ಸಿದ್ಧವಾಗಬೇಕಿದೆ.

ಮಂಡಿ ದುರಸ್ತಿಗೆ ಮೂಗಿನ ನೆರವು

ಮೂಗಿನ ಹೊಳ್ಳೆಗಳ ನಡುವಿರುವ ಮೃದ್ವಸ್ಥಿ (ಕಾರ್ಟಿಲೇಜ್) ಸವೆದ ಕಾಲಿನ ಕೀಲುಗಳಿಗೆ ನೆರವಾಗಬಲ್ಲುದಂತೆ. ಹೀಗೆಂದು ಬೇಸೆಲ್ ವಿಶ್ವವಿದ್ಯಾನಿಲಯದ ವೈದ್ಯರು ಇತ್ತೀಚೆಗೆ ವರದಿ ಮಾಡಿದ್ದಾರೆ. ಸುರೂಪಿ ಚಿಕಿತ್ಸೆಯಲ್ಲಿ ದೇಹದ ಒಂದು



ಭಾಗದಿಂದ ತೆಗೆದ ಚರ್ಮವನ್ನು ಇನ್ನೊಂದು ಭಾಗದ ದುರಸ್ತಿಗೆ ಬಳಸುವುದು ಸಹಜ. ಆದರೆ ಮೃದ್ವಸ್ಥಿ ಚರ್ಮದಂತೆ ಪುನಃ ಬೆಳೆಯುವ ಅಂಗಾಂಶವಲ್ಲ. ಹಾಗಿದ್ದೂ ಅದು ಕೀಲುಗಳಲ್ಲಿ ಸವೆದು ಹೋದ ಮೃದ್ವಸ್ಥಿಗಳ ಜಾಗವನ್ನು ತುಂಬಬಹುದು ಎನ್ನುವುದು ಈ ಕಾರಣದಿಂದಾಗಿ ಮಂಡಿನೋವು, ಕೀಲುನೋವು ಅನುಭವಿಸುತ್ತಿರುವವರಿಗೆ ಸಮಾಧಾನ ನೀಡುವ ಸಂಗತಿ. ಇಪ್ಪತ್ತೈದು ರೋಗಿಗಳಲ್ಲಿ ಅವರ ಮೂಗಿನಿಂದ ತೆಗೆದ ಮೃದ್ವಸ್ಥಿಯನ್ನು ಕೀಲುಗಳಲ್ಲಿ ಚುಚ್ಚಿದ್ದು, ಕೀಲುಗಳಲ್ಲಿ ಅವು ಬೆಳೆದು ಖಾಲಿ ಜಾಗೆಯನ್ನು ಭರ್ತಿ ಮಾಡುತ್ತಿರುವುದು ಚಿತ್ರದಲ್ಲಿ ಕಾಣಿಸಿದೆ.